ಎನ್ನುವುದು ನನ್ನ ಮೊದಲ ಸಲಹೆ' ಎಂದರಂತೆ.

ಶೆಟ್ಟರು ಕಂಗಾಲಾಗಿ 'ಎಲ್ಲಾದರೂ ಉಂಟೇ ಸರ್? ಅವರು ಬ್ರಾಹ್ಮಣರು, ನಾವು ಬಂಟರು! ನಮ್ಮ ಸಂಬಂಧ ಹೇಗೆ ಆಗುತ್ತದೆ ಹೇಳಿ? ಇಷ್ಟಕ್ಕೂ ಇವಳಿಗೆ ಇಬ್ಬರು ತಂಗಿಯಂದಿರಿದ್ದಾರೆ. ಒಬ್ಬ ಅಣ್ಣ ಮಿಲಿಟ್ರಿಯಲ್ಲಿದ್ದಾನೆ. ಇವಳು ಹೀಗೆ ಮಾಡಿಕೊಂಡರೆ ಅವರಿಗೆಲ್ಲ ನಾಳೆ ಮದುವೆ ಆಗುವುದು ಕಷ್ಟ. ಖಂಡಿತ ಇದು ಸಾಧ್ಯವಿಲ್ಲ' ಎಂದರಂತೆ.

ಪ್ರಾಂಶುಪಾಲರು 'ಅದು ನಿಮ್ಮ ಇಷ್ಟ. ನಾನು ಅದರಲ್ಲಿ ಮಧ್ಯ ಪ್ರವೇಶಿಸುವುದಿಲ್ಲ. ನಾನು ಈಗೇನು ಮಾಡಬೇಕು ಎಂದು ನಿಮ್ಮ ಅಭಿಪ್ರಾಯ?' ಎಂದು ಪ್ರಶ್ನಿಸಿದ್ದಕ್ಕೆ – 'ಸರ್ ಹೀಗೆ ಮಾಡಿ, ಹಾಗೆ ಮಾಡಿ ಎನ್ನಲಿಕ್ಕೆ ನಾನು ಯಾರು? ನಾಳೆಯಿಂದ ನಾನು ನಮ್ಮ ಹುಡುಗಿಯನ್ನು ಕಾಲೇಜಿಗೆ ಕಳುಹಿಸುವುದಿಲ್ಲ ಅಷ್ಟೇ'.

'ನೋ ನೋ ಅದು ತುಂಬಾ ತಪ್ಪು ನಿರ್ಧಾರ ಶೆಟ್ರೇ. ನೀವು ನಿಮ್ಮ ಹುಡುಗಿಯನ್ನು ಕಾಲೇಜಿಗೆ ಕಳುಹಿಸಬೇಕು. ನಾನು ನಮ್ಮ ಮೇನೇಜ್‌ಮೆಂಟಿಗೆ ಈ ವಿಷಯ ತಿಳಿಸುತ್ತೇನೆ. ಅವರು ಇಂಥ ವಿಚಾರಗಳಲ್ಲಿ ಸೀರಿಯಸ್ಸಾದ ಸ್ಟೆಪ್ ತಗೊಳ್ಳುತ್ತಾರೆ' ಎಂದು ಗಂಭೀರವಾಗಿ ಹೇಳಿದ ಪ್ರಾಂಶುಪಾಲರು, 'ನಾನು ಆ ಮೇಷ್ಟ್ರನ್ನು ಕರೆದು ಏನೂ ಕೇಳುವ ಹಾಗಿಲ್ಲ. ಪ್ರಾಂಶುಪಾಲನಾಗಿ ಅಲ್ಲ; ಮಾನವೀಯತೆಯ ಮತ್ತು ನೈತಿಕತೆಯ ದೃಷ್ಟಿಯಲ್ಲಿ ಕೂಡಾ. ಏಕೆಂದರೆ ನಾನೂ ನನ್ನ ವಿದ್ಯಾರ್ಥಿಯನ್ನೇ ಮದುವೆಯಾದವನು' ಎಂದರಂತೆ.

'ಓದಿದವರ ಎಲ್ಲಾ ವಿಚಾರ ಇಷ್ಟೇ' ಎಂದ ಮಾತು ಶೆಟ್ಟರ ಬಾಯಿಯಿಂದ ಬಂದರೂ ಅವರು ಅದನ್ನು ದೊಡ್ಡದಾಗಿ ಆಡದೆ ಪಿಸುಗುಟ್ಟಿದ್ದರಂತೆ.

ಎರಡು ದಿನಗಳ ಮೇಲೆ ಕ್ಲಾಸಿಗೆ ಬಂದ ಸರೋಜಾಳನ್ನು ನೋಡಿದ ನಾನು ಅವಳ ಮುಖದಲ್ಲಿನ ಕಾಂತಿ ಕಡಿಮೆಯಾದದ್ದನ್ನು ಗಮನಿಸಿದರೂ ಗಮನಿಸದ ಹಾಗೆ ಪಾಠ ಮುಗಿಸಿದೆ. ಸರೋಜಾಳೂ ಅಷ್ಟೇ, ನನ್ನ ಮುಖವನ್ನು ನೋಡದೆ ದೂರದಲ್ಲೆಲ್ಲೋ ದೃಷ್ಟಿ ನೆಟ್ಟು ಪಾಠವನ್ನು ಕೇಳುವಂತೆ ನಟಿಸಿದ್ದಳು. ಇದಾಗಿ ಮೂರು ದಿನಗಳ ಮೇಲೆ ಕಾಲೇಜು ಬಿಡುತ್ತಿದ್ದ ಹಾಗೆ ಸರೋಜಾಳ ಕ್ಲಾಸ್‌ಮೇಟ್ ರೋಹಿಣಿ ಶೆಣೈ ನನ್ನ ಹತ್ತಿರಕ್ಕೆ ಬಂದು, 'ಸರ್, ಇಫ್ ಯು ಡೋಂಟ್ ಮಿಸ್ ಅಂಡರ್‌ಸ್ಟಾಂಡ್, ಪ್ಲೀಸ್ ಮೇ ಯು ಕಮ್ ಅವರ್ ಹೌಸ್ ದಿಸ್ ಈವ್ನಿಂಗ್?' ಎಂದು ಕೇಳಿದಳು. ನಾನು 'ಯಾಕೆ?' ಎಂದೆ.

'ಗೊತ್ತಿಲ್ಲ. ನೀವು ಬರಲೇಬೇಕಂತೆ ಎಂದಿದ್ದಾರೆ ನನ್ನಪ್ಪ. ಅದು ಸಾಧ್ಯವಿಲ್ಲ ಎಂದಾದರೆ ನಮ್ಮ ಅಪ್ಪನೇ ನಿಮ್ಮ ರೂಮಿಗೆ ಬರ್‍ತಾರಂತೆ' ಎಂದಳು ಆಕೆ.

'ನಾನು ನಿಮ್ಮಲ್ಲಿಗೆ ಬರುವುದಿಲ್ಲ. ಅಪ್ಪನೇ ನನ್ನ ರೂಮಿಗೆ ಬರಲಿ' ಎಂದೆ.

ಆ ದಿನ ಸಂಜೆ ರಮಾನಂದ ಶೆಣೈಯವರೇ ನನ್ನ 'ಬಿಡಾರ'ಕ್ಕೆ ಬಂದು 'ನಾನು ರಮಾನಂದ ಶೆಣೈ, ಅಂದರೆ ರೋಹಿಣಿ ಶೆಣೈಯವರ ಅಪ್ಪ. ನೀವು ಪ್ರೀತಿಸುವ ಸರೋಜಾ ಅಂದರೆ ನನಗೆ, ನಮ್ಮ ರೋಹಿಣಿಗೆ ತನ್ನ ಅಕ್ಕ ತಂಗಿಗಿಂತಲೂ ಹೆಚ್ಚು ಪ್ರೀತಿ! ಆ ಕಾರಣಕ್ಕಾಗಿ ನಿಮಗೆ ಹೆಲ್ಪ್ ಬೇಕಾಗಿದ್ದರೆ ಮಾಡಲು ನಾನು ಸಿದ್ಧ ಎಂದು ಹೇಳಲು ಬಂದಿದ್ದೇನೆ' ಎಂದರು.

'ಏನು ಹೆಲ್ಪ್ ನಿಮ್ಮದು?'

'ಅದೇ ನೀವು ಸರೋಜಾಳಿಗೆ ಏನಾದರೂ ಹೇಳೋದಿದ್ದರೆ ನನ್ನ ಮಗಳ ಮೂಲಕ ಪತ್ರ ಕೊಟ್ಟು ತಿಳಿಸಬಹುದು. ಸರೋಜಾ ಏನಾದರೂ ನಿಮಗೆ ಹೇಳುವುದಿದ್ದರೆ ಅದನ್ನು ನನ್ನ ಮಗಳೇ ನಿಮಗೆ ತಂದುಕೊಡಬಹುದು.'

ನಾನು ಕ್ಷಣ ಹೊತ್ತು ಯೋಚಿಸಿ 'ಥ್ಯಾಂಕ್ಯೂ ಶೆಣೈಯವರೇ' ಎನ್ನುತ್ತಾ, 'ಸದ್ಯ ನನ್ನ ಉದ್ಯೋಗ ಇಲ್ಲಿ ಡೋಲಾಯಮಾನವಾಗಿದೆ. ಮುಂದೆ ಏನಾಗುತ್ತೋ ನೋಡೋಣ. ಆದರೆ ಭವಿಷ್ಯದಲ್ಲಿ ನಮ್ಮ ಮದುವೆಗೆ ನೀವು ಸಾಕ್ಷಿಯಾಗಿರಬೇಕು'.

ಇಷ್ಟು ಮಾತುಕತೆಗಳು ನಡೆದು ಹದಿನೈದು ದಿನದಲ್ಲಿ ನಾನು ಕಾಲೇಜು ಟ್ರಸ್ಟಿನ ಅಧ್ಯಕ್ಷರ ಆದೇಶದ ಮೇರೆಗೆ ಅವರ ಕಚೇರಿಗೆ ಹೋಗಿ ಭೇಟಿ ನೀಡಿ ರಾಜೀನಾಮೆ ಪತ್ರ ಸಲ್ಲಿಸಿದೆ.

ಇಷ್ಟನ್ನು ಹೇಳಿದ ರಾಯರು 'ಈ ವಿಚಾರವನ್ನೆಲ್ಲ ನಾನು ಆಗಲೇ ನಿಮಗೆ ಪೊಲೀಸ್ ಸ್ಟೇಶನ್ನಿನಲ್ಲಿ ಹೇಳಿದ್ದೆ' ಎಂದು ಹೇಳಿದಾಗ ಸರೋಜಮ್ಮ – 'ಅಯ್ಯೋ ದೇವರೇ ಅಲ್ಲಿಯೂ ನಮ್ಮ ಮಾನ ಹರಾಜು ಹಾಕಿದಿರಿ ನೀವು!' ಎಂದು ದೊಡ್ಡದಾಗಿ ನಕ್ಕು, 'ನೀವು ಇನ್ನು ಏನು ಹೇಳುವುದೂ ಬೇಡ. ಉಳಿದದ್ದನ್ನು ನಾನೇ ಹೇಳುತ್ತೇನೆ ಸದಾಶಿವಣ್ಣನಿಗೆ' ಎಂದರು.

'ಆಲ್ ರೈಟ್' ಎಂದು ಡ್ರೆಸ್ ಬದಲಾಯಿಸಲು ರಾಯರು ಒಳಗೆ ಹೋಗುತ್ತಿದ್ದ ಹಾಗೆ ಸರೋಜಮ್ಮ 'ನಾನು ನಿಮಗೆ ಕಾಫಿ ಮಾಡಿ ಕೊಡಲೇ ಅಂತ ಕೇಳಲಿಲ್ಲ. ಕುಪ್ಪಣ್ಣಯ್ಯನವರಲ್ಲಿ ಹೋಗಿ ಬಂದವರು ಎಂದಿರಲ್ಲ ನೀವು? ಬೇಕಾದರೆ ಹೇಳಿ ಐದು ನಿಮಿಷದಲ್ಲಿ ಕಾಫಿ ರೆಡಿಮಾಡಿ ತರುತ್ತೇನೆ' ಎಂದರು.

ಶೆಟ್ಟರು 'ಅಯ್ಯೋ ಏನೂ ಬೇಡ ಸರೋಜಕ್ಕ. ಈಗ ನಿಮ್ಮ ಕತೆ ಮುಂದುವರಿಸಿ ತುಂಬಾ ಮಜಾ ಇರುತ್ತದೆ' ಎಂದು ಮುಸಿ ಮುಸಿ ನಕ್ಕರು.

ಸರೋಜಮ್ಮ 'ಈಗ ಕೇಳಿದರೆ ನಿಮಗೂ ನಗು ಬಂದೀತು ಸದಾಶಿವಣ್ಣ. ಆಗ ನನ್ನ ಅವಸ್ಥೆ ನೋಡಬೇಕಿತ್ತು. ರಾಮ ರಾಮಾ' ಎನ್ನುತ್ತಾ – 'ಇಷ್ಟಾಯಿತಲ್ಲ, ನಮ್ಮ ಪ್ರೇಮಕತೆ' ಎಂದು ಮುಗುಳ್ನಕ್ಕು, 'ಆಮೇಲೆ ಏನಾಯಿತು ಅಂದರೆ, ಇವರು ಆ ವರುಷದ ಮಾರ್ಚ್‌ವರೆಗೆ ಅಂದರೆ ಆ ವರುಷದ ಪಿ.ಯು.ಸಿ. ಪರೀಕ್ಷೆ ಮುಗಿಯುವ ತನಕ ನಮ್ಮ ಕಾಲೇಜಿನಲ್ಲಿ ಇದ್ದು ಕಾಲೇಜಿನಿಂದ ಬಿಡುಗಡೆಗೊಂಡರು. ನಂತರ ಅವರೇ ಹೇಳಿದ ಹಾಗೆ ರಾಂಪುರದ ಬಸವರಾಜೇಶ್ವರ ಕಾಲೇಜಿನಲ್ಲಿ ಖಾಲಿ ಇದ್ದ ಇಂಗ್ಲಿಷ್ ಉಪನ್ಯಾಸಕ ಹುದ್ದೆಗೆ ಅರ್ಜಿ ಹಾಕಿದಾಗ ಇವರಿಗೆ ಇಂಟರ್‌ವ್ಯೂಗೆ ಕರೆ ಬಂತಂತೆ. ಇಂಟರ್‌ವ್ಯೂನಲ್ಲಿ 'ಯಾಕೆ ನೀವು ಗೋವಿಂದಪ್ಪ ಕಾಲೇಜಿಗೆ ರಾಜೀನಾಮೆ ಕೊಟ್ಟು ಹೊರಬಂದಿರಿ?' ಎಂಬ ಪ್ರಶ್ನೆ ಬಂದರೆ ಹೇಗೆ ಉತ್ತರಿಸುವುದು ಎಂಬ ತಲ್ಲಣದಲ್ಲೇ ಇವರು ಇಂಟರ್‌ವ್ಯೂ ಅನ್ನು ಫೇಸ್ ಮಾಡಿದ್ದರಂತೆ. ಅಲ್ಲಿ ಇವರ ಅಕಡೆಮಿಕ್ ಸರ್ಟಿಫಿಕೇಟ್ ಮತ್ತು ಗೋವಿಂದಪ್ಪ ಕಾಲೇಜಿನಿಂದ ಬರೆದುಕೊಟ್ಟ ಮೆಚ್ಚುಗೆ ಪತ್ರ ಮತ್ತು ಕಂಡಕ್ಟ್ ಸರ್ಟಿಫಿಕೇಟುಗಳನ್ನು ನೋಡಿದ ಬಸವರಾಜೇಶ್ವರ ಕಾಲೇಜು ಟ್ರಸ್ಟ್ ಅಧ್ಯಕ್ಷ ಪಾಟೀಲರು 'ನಾನು ಕೇಳುತ್ತಿದ್ದೇನೆ ಎಂದು ತಪ್ಪು ತಿಳಿಬೇಡಿ ಮಿ. ರಾವ್. ನಮ್ಮ ಕಾಲೇಜಿಗಿಂತಲೂ ಪೂರ್ವದಲ್ಲೇ ಪ್ರಾರಂಭವಾದ ಮತ್ತು ಒಳ್ಳೆ ಅಕಡೆಮಿಕ್ ಹಿನ್ನೆಲೆಯುಳ್ಳ ಗೋವಿಂದಪ್ಪ ಕಾಲೇಜಿನ ಉಪನ್ಯಾಸ ಹುದ್ದೆಗೆ ನೀವು ರಾಜಿನಾಮೆ ಕೊಡಲು ಕಾರಣ ಏನು?' ಎಂದು ಪ್ರಶ್ನಿಸಿದ್ದರಂತೆ.

ಆಗ ರಾಯರು ಒಂದು ಕ್ಷಣ ಮೌನ ವಾಗಿದ್ದು, 'ನೀವು ವಾಸ್ತವ ವಿಚಾರವನ್ನು ಪರಿಗ್ರಹಿಸುವುದಾದರೆ ನಾನು ಫ್ಯಾಕ್ಟ್ ಹೇಳುತ್ತೇನೆ ಸರ್. ಸುಳ್ಳನ್ನೇ ನಿರೀಕ್ಷಿಸುವುದೇ ಆದರೆ, ಅದನ್ನು ಹೇಳಲೂ ನನಗೆ ಗೊತ್ತು' ಎಂದರಂತೆ. ಸೆಲೆಕ್ಷನ್ ಕಮಿಟಿ ಸದಸ್ಯರೆಲ್ಲ ಪರಸ್ಪರ ಮುಖ ನೋಡಿಕೊಳ್ಳುತ್ತಿದ್ದಂತೆ ಪಾಟೀಲರು 'ವೆರಿ ಗುಡ್. ಪ್ಲೀಸ್ ಟೆಲ್ ದ ಫ್ಯಾಕ್ಟ್' ಎಂದರಂತೆ.

ರಾಯರು ತಮ್ಮ ಪ್ರೇಮ ಪ್ರಕರಣವನ್ನು ವಿವರಿಸಿ 'ನನ್ನ ಅಂತರ್ಜಾತಿಯ ವಿವಾಹಕ್ಕೆ ಯಾವ ಊರಲ್ಲಿ ಒಪ್ಪಿಗೆ ಇಲ್ಲವೋ ನಾನಲ್ಲಿ ಇರುವುದು ಸರಿಯಲ್ಲ ಎಂದು ಕಾಲೇಜಿನಿಂದ ಹೊರಬಂದೆ. ಬಸವಣ್ಣ ಅತ್ಯಂತ ಕ್ರಾಂತಿಕಾರಿ ಪುರುಷ. ಯುಗಪ್ರವರ್ತಕ, ತನ್ನ ಕಾಲದಲ್ಲಿ ಅಂತರ್ಜಾತಿಯ ವಿವಾಹಕ್ಕೆ ಪ್ರಯತ್ನಿಸಿದ ಮಹಾನುಭಾವ. ಅದರಿಂದ ಅವನು ಅನುಭವಿಸಿದ ಸಂಕಷ್ಟ, ಅದರಿಂದ ಶರಣರಿಗಾದ ಅನ್ಯಾಯ ಎಲ್ಲಾ ನಾನು ಬಲ್ಲೆ. ಆ ನೆಲೆಯಲ್ಲಿ ಬಸವಣ್ಣನ ಹೆಸರಿನಲ್ಲಿ ಇರುವ ಈ ಕಾಲೇಜು ನನ್ನ ನಿಲುವನ್ನು ಒಪ್ಪಿ ಪ್ರೋತ್ಸಾಹಿಸೀತು ಎಂದು ನಿಮ್ಮ ಕಾಲೇಜಿನ ಉಪನ್ಯಾಸಕ ಹುದ್ದೆಗೆ ಅರ್ಜಿ ಹಾಕಿದೆ' ಎಂದರಂತೆ.

ಪಾಟೀಲರು 'ವೆರಿ ಗುಡ್ ಡಿಸಿಶನ್. ವಿ ಮಸ್ಟ್ ಎನ್‌ಕರೇಜ್ ಯುವರ್ ಪ್ರೊಗ್ರೆಸಿವ್‌ನೆಸ್' ಎಂದು ಹೇಳಿ ಜೊತೆಯಲ್ಲಿದ್ದ ಆಯ್ಕೆ ಸಮಿತಿಯವರ ಮುಖ ನೋಡಿ, 'ಇವರು ಎಲ್ಲಾ ವಿಧದಲ್ಲೂ ಅರ್ಹತೆಯುಳ್ಳ ವ್ಯಕ್ತಿ. ಇವರನ್ನೇ ಆಯ್ಕೆ ಮಾಡೋಣ' ಎಂದು ಇವರ ಎದುರೇ ಹೇಳಿದ್ದು ರಾಯರಿಗೆ ಎಲ್ಲಿಲ್ಲದ ಖುಷಿ ತಂದಿತ್ತಂತೆ.

ರಾಯರು ಆ ದಿನವೇ 'ನಿನ್ನ ಓದು ಮುಗಿಯುವ ತನಕ ಸರೋಜಾ, ನಾವು ಮದುವೆಗೆ ಕಾಯಬೇಕು. ನೀನು ಈ ವಿಚಾರದಲ್ಲಿ ಖಂಡಿತ ಚಿಂತಿಸಬಾರದು' ಎಂದು ನನ್ನನ್ನು ಸಂತೈಸಿ ಪತ್ರ ಬರೆದಿದ್ದರು.

'ಅಂತೂ ಮತ್ತೆ ಮೂರು ವರುಷ ಕಷ್ಟಪಟ್ಟು ನಾನು ಡಿಗ್ರಿ ಮುಗಿಸಿದೆ. ಇವರಿಗೆ ನಾನು ಡಿಗ್ರಿ ಮುಗಿಸಬೇಕೆಂಬ ಆಸೆ ಇತ್ತಲ್ಲ ಅದಕ್ಕೆ' ಎಂದು ದೊಡ್ಡದಾಗಿ ನಕ್ಕ ಸರೋಜಮ್ಮ, 'ನನ್ನ ಕೊನೆಯ ವರುಷದ ಪರೀಕ್ಷೆ ಮುಗಿಯುವಷ್ಟರಲ್ಲಿ ಇವರೂ ರಮಾನಂದ ಶೆಣೈಯವರೂ ನಮ್ಮ ಮದುವೆಯನ್ನು ರಾಂಪುರದ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ನಡೆಸುವುದೆಂದು ನಿಶ್ಚಯಿಸಿದ್ದರು. ಅಷ್ಟೇ ಅಲ್ಲ, ನನ್ನ ಗೆಳತಿ ರೋಹಿಣಿಯ ಜೊತೆ ರೋಹಿಣಿಯ ಅಕ್ಕನ ಮನೆ ಮೈಸೂರಿಗೆ ನಾವು ಹೋಗುವುದೆಂದು